ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 09ನೇ ಮಾರ್ಚ್, 2020

ಸಕಾಲ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತು

ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು)

439 (481) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಕಾಲ ಯೋಜನೆಯು ಸದ್ಯ ಸರ್ಕಾರದ ಎಷ್ಟು ಇಲಾಖೆಗಳಲ್ಲಿ ಜಾರಿಯಲ್ಲಿದೆ ಮತ್ತು ಎಷ್ಟು ಸೇವೆಗಳನ್ನು ನೀಡುತ್ತಿದೆ ; (ಇಲಾಖಾವಾರು ಮಾಹಿತಿ ನೀಡುವುದು)

(ಆ) ಸಕಾಲ ಸೇವೆಯಲ್ಲಿ ಅರ್ಜಿಗಳ ಸ್ವೀಕೃತಿ ಮತ್ತು ಅದಕ್ಕೆ ಪೂರಕವಾಗಿ ತಿರಸ್ಕøತಗೊಂಡ ಅರ್ಜಿಗಳ ಪ್ರಮಾಣ ಎಷ್ಟು ; ಅತೀ ಹೆಚ್ಚು ತಿರಸ್ಕøತಗೊಂಡ ಅರ್ಜಿಗಳು ಯಾವ ಇಲಾಖೆಗೆ ಸಂಬಂಧಿಸಿದವುಗಳಾಗಿವೆ ಮಾಹಿತಿ ನೀಡುವುದು ;

(ಇ) ಸಕಾಲ ಅರ್ಜಿಗಳ ಅತೀ ಕಡಿಮೆ ಸ್ವೀಕೃತಿಯು ಯಾವ ಯಾವ ಇಲಾಖೆಗಳಲ್ಲಿ ಕಂಡು ಬರುತ್ತದೆ ; ಇದಕ್ಕೆ ಕಾರಣಗಳೇನು ; ಹಾಗೂ ಇದರ ನಿವಾರಣೆಗೆ ಅನುಸಿರಿಸಿದ ಮಾರ್ಗೋಪಾಯಗಳೇನು ;

(ಈ) ಸಕಾಲ ಸೇವೆಯನ್ನು ಸಚಿವಾಲಯಕ್ಕೆ ವಿಸ್ತರಿಸಲು ಇರುವ ತೊಂದರೆಗಳೇನು ; ಸಚಿವಾಲಯದಲ್ಲಿನ ಅರ್ಜಿಗಳ ವಿಲೇವಾರಿಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಸಕಾಲ ಯೋಜನೆಯು ಜಾರಿಯಾಗಿ ದಶಕ ಸಮೀಪಿಸುತ್ತಿರುವಾಗ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ ; ಇದನ್ನು ಹೆಚ್ಚು ಜನಸ್ನೇಹಿಯಾಗಿಸುವಲ್ಲಿ ಇರುವ ತೊಡಕುಗಳೇನು ?